## IVನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

**ಉಪಸ್ಥಿತರುಃ**

**ಶ್ರೀ ಕೇಶವಮೂರ್ತಿ.ಬಿ.**

ಬಿ.ಎ. ಎಲ್‌ಎಲ್.ಬಿ,
IVನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ,
ಬೆಂಗಳೂರು ನಗರ.

**20ನೇ ತಾರೀಖು ಮಾರ್ಚ್, 2025**

**ಸಿಸಿ ಸಂಖ್ಯೆ - 5688/2009**

**ಫಿರ್ಯಾದುದಾರರು :** ಮೆಃ ಪಾಲಾಡ ಆಗ್ರೋ ರಿಸರ್ಚ್ ಫೌಂಡೇಶನ್ಸ್ ಪ್ರೈವೇಟ್ ಲಿಮಿಟೆಡ್,
ಸರ್ವೆ ನಂ.92/5, ಕನ್ನಲ್ಲಿ ಗ್ರಾಮ,
ಸೀಗೂನಹಳ್ಳಿ ಕ್ರಾಸ್, ಮಾಗಡಿ ಮೈನ್ ರೋಡ್,
ಯಶವಂತಪುರ ಹೋಬಳಿ,
ಬೆಂಗಳೂರು-91.
(ಇವರ ಪರವಾಗಿ ಪ್ರತಿನಿಧಿಸುವವರು ಶ್ರೀ ಸಿ.ಎಂ.ಎನ್. ಶಾಸ್ತ್ರೀ, ಮ್ಯಾನೇಜಿಂಗ್ ಡೈರೇಕ್ಟರ್)

(ಫಿರ್ಯಾದುದಾರರ ಪರ ಶ್ರೀ ವೈ.ಹೆಚ್.ವಿ., ವಕೀಲರು)

**-ವಿರುದ್ಧ-**

**ಆರೋಪಿ :** ಶ್ರೀ ಅಶೋಕ್ ಕುಮಾರ್ ಶೆಟ್ಟಿ,
ಬಿನ್. ಚಂದ್ರಶೇಖರ್ ಶೆಟ್ಟಿ,
ಪೋಸ್ಟ್ ಆಫೀಸ್ ಹತ್ತಿರ,
ಹೊಸಮಟ ಕೋರ್ಗೆ ಗ್ರಾಮ,
ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
ವಾಸಃ ನಂ.301, 11ನೇ ಮೈನ್, 3ನೇ ಹಂತ,
ಬಿಇಎಂಎಲ್ ಲೇಔಟ್, ರಾಜರಾಜೇಶ್ವರಿ ನಗರ,
ಬೆಂಗಳೂರು - 98.

(ಆರೋಪಿಗಳ ಪರ ಶ್ರೀ ಎಸ್.ಜಿ.ಹೆಚ್., ವಕೀಲರು)

## :: ಆದೇಶ ::

ಫಿರ್ಯಾದುದಾರರು ದಂ. ಪ್ರ. ಸಂ. ಕಲಂ **200** ರಡಿ ಆರೋಪಿಯ ವಿರುದ್ಧ ಭಾ. ದಂ. ಸಂ. ಕಲಂ **406, 409, 420 ಹಾಗೂ 465** ರ ಅಪರಾಧಗಳಿಗೆ ಖಾಸಗಿ ದೂರನ್ನು ಸಲ್ಲಿಸಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆಃ**

ಫಿರ್ಯಾದುದಾರರು ತಮ್ಮ ದೂರಿನಲ್ಲಿ, ಆರೋಪಿಯು ದೂರುದಾರರಿಗೆ ಸೇರಿದ ಮೆಃ ಪಾಲಾಡ ಆಗ್ರೋ ರಿಸರ್ಚ್ ಪೌಂಡೇಶನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಏರಿಯಾ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದರೆಂದು, ನಂತರ ಆರೋಪಿಯನ್ನು ಬ್ಯಾಂಚ್ ಮ್ಯಾನೇಜರ್ ಆಗಿ ಬಡ್ತಿ ನೀಡಿದ್ದಾಗಿ, ನಂತರ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಬಡ್ತಿ ನೀಡಿ ಉತ್ತರಪ್ರದೇಶದ ಮೊರದಾ ಬಾದ್ ನ ಮಿಂಟ್ ಪ್ರಾಜೆಕ್ಟ್ ನೋಡಿಕೊಳ್ಳಲು ನೇಮಕ ಮಾಡಿದ್ದಾಗಿ ಪ್ರತಿಪಾದಿಸುತ್ತಾರೆ. ದೂರುದಾರರು ಮುಂದುವರೆದು, ಸದರಿ ಯೋಜನೆಯನ್ನು ಆರೋಪಿ ಜೊತೆ ನೋಡಿಕೊಳ್ಳಲು ನಿಹಾಲ್ ಸಿಂಗ್ ಮತ್ತು ಬಿ.ಎನ್. ಪಾಠಕ್ ರವರನ್ನು ಸಹಾಯಕರಾಗಿ ನೇಮಕ ಮಾಡಿದ್ದಾಗಿ, ಬಿ.ಎನ್. ಫಾಠಕ್ ರವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಿಸೌಲಿ ಶಾಖೆಯಲ್ಲಿ ಅಕೌಂಟ್ ನಂ.11419451780 ರಂತೆ ಬ್ಯಾಂಕ್ ಖಾತೆ ತೆರೆದಿದ್ದಾಗಿ, ಸದರಿ ಖಾತೆಯ ಮುಖಾಂತರ ರೈತರಿಗೆ ಹಣ ವಿತರಣೆಯನ್ನು ಮಾಡುತ್ತಿದ್ದುದಾಗಿ ಪ್ರತಿಪಾದಿಸುತ್ತಾರೆ. ಆರೋಪಿಯ ವ್ಯವಹಾರಗಳ ಬಗ್ಗೆ ಸಂಶಯ ಬಂದು ಪರಿಶೀಲನೆ ಮಾಡಿದಾಗ ಆರೋಪಿಯು ರೈತರ ಹೆಸರಿನಲ್ಲಿ ಚೆಕ್ ಗಳನ್ನು ನೀಡಿರುವುದಾಗಿ ನಮೂದಿಸಿ ಸದರಿ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು, ಆರೋಪಿಯು ನೀಡಿದ ಸ್ಟೇಟ್ ಮೆಂಟ್ ಮತ್ತು ವಿತರಣೆಯಾಗಿರುವ ಚೆಕ್ ಗಳ ನಡುವೆ ಹೊಲಿಕೆಯಾಗಿರುವುದಿಲ್ಲವೆಂದು ತಿಳಿಸುತ್ತಾರೆ. ಮುಂದುವರೆದು, ಫಾಠಕ್ ರವರ ಖಾತೆಯಿಂದ 2 ಲಕ್ಷದ 200 ರೂ. ಗಳನ್ನು ದಿನಾಂಕ 31-07-2008 ರಂದು ಆರೋಪಿಯು ಆರ್.ಆರ್. ನಗರ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆಗೆ ವರ್ಗಾವಣೆ

ಮಾಡಿಕೊಂಡಿದ್ದಾಗಿ, ದಿನಾಂಕ 01-07-2008 ರಂದು ಮತ್ತು 03-07-2008 ರಂದು ಸಹ ಆರೋಪಿಯು ಹಣವನ್ನು ತೆಗೆದು ದುರುಪಯೋಗ ಮಾಡಿಕೊಂಡಿರುವುದಾಗಿ ಪ್ರತಿಪಾದಿಸುತ್ತಾರೆ. ಮುಂದುವರೆದು, 2007 ರಲ್ಲಿ ಆರೋಪಿಯು ಪ್ರತ್ಯೇಕ ಕಂಪನಿಯನ್ನು ತೆರೆದು ಬಯೋ ಪರ್ಟಿಲೈಶ‍ರ್ಸ್ ಮತ್ತು ಮೈಕ್ರೋ ನಟ್ ಮಿಂಟ್ಸ್ ತಯಾರು ಮಾಡಲು ಪ್ರಾರಂಭ ಮಾಡಿದ್ದಾಗಿ, ಈ ಮೂಲಕ ಆರೋಪಿಯು ದೂರುದಾರರ ಕಂಪನಿ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡಿರುವುದಾಗಿ ಪ್ರತಿಪಾದಿಸುತ್ತಾರೆ. ಮುಂದುವರೆದು, ಆರೋಪಿಯು ದೂರುದಾರರ ಕಂಪನಿಗೆ ಸೇರಿದ ರೀತಿಯ ಲೇಬಲ್ ಗಳು ಮತ್ತು ವಿನ್ಯಾಶಗಳನ್ನು ತನ್ನ ವಸ್ತುಗಳಿಗೆ ಉಪಯೋಗ ಮಾಡಿಕೊಂಡಿರುವುದಾಗಿ ಈ ಮೂಲಕ ಸಹ ಆರೋಪಿಯು ದೂರುದಾರರ ಕಂಪನಿಗೆ ಮೋಸ ಮಾಡಿರುವುದಾಗಿ, ಈ ಮೂಲಕ ಆರೋಪಿಯು **ಭಾ. ದಂ. ಸಂ. ಕಲಂ 406, 409, 420 ಹಾಗೂ 465** ರನ್ವಯ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುವುದಾಗಿ, ಆದ್ದರಿಂದ ಸದರಿ ಆರೋಪಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ಈ ದೂರು ಸಲ್ಲಿಸಿರುತ್ತಾರೆ.

3. ದೂರನ್ನು ಸ್ವೀಕರಿಸಿ ನ್ಯಾಯಾಲಯ ದೂರುದಾರರ ಸ್ವಪ್ರಮಾಣಿತ ಹೇಳಿಕೆಯನ್ನು ದಾಖಲಿಸಿ ಆರೋಪಿಯ ವಿರುದ್ಧ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗೆ ಸಮನ್ಸ್ ಹೊರಡಿಸಿರುತ್ತದೆ. ಆರೋಪಿಯು ಸಮನ್ಸ್ ಸ್ವೀಕರಿಸಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ ಮತ್ತು ದೂರುದಾರರ ಪ್ರಕರಣವನ್ನು ಸ್ಪರ್ದಿಸಿರುತ್ತಾರೆ.

4. ನ್ಯಾಯಾಲಯವು ದೂರುದಾರರಿಗೆ ತಮ್ಮ ಪ್ರಕರಣವನ್ನು ಸಾಭೀತುಪಡಿಸಲು ಅವಕಾಶ ಮಾಡಿಕೊಟ್ಟಿದೆ. ದೂರುದಾರರ ಕಂಪನಿಯ ಪರವಾಗಿ ಸಿ.ಎಂ.ಎನ್. ಶಾಸ್ತ್ರೀ ರವರು ಪ್ರಾಸಾ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರ ಪರವಾಗಿ ಪ್ರಾಸಾ-2 ನಿಹಾಲ್ ಸಿಂಗ್ ಎಂದು ವಿಚಾರಣೆಗೆ ಒಳಪಟ್ಟು ನಿಪಿ.1 ರಿಂದ 59 ದಾಖಲಾತಿಗಳನ್ನು

ಗುರುತಿಸಿರುತ್ತಾರೆ. ಪ್ರಾಸಾ-1 ಹಾಗೂ 2 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ. ಆರೋಪಿತರು ಮತ್ತು ದೂರುದಾರರ ಪರವಾಗಿ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ.

**5.** ದೂರು ಮತ್ತು ಫಿರ್ಯಾದುದಾರರ ಸಾಕ್ಷ್ಯವನ್ನು ಓದಿದೆ. ನನ್ನ ತೀರ್ಮಾನಕ್ಕೆ ಉದ್ಭವಿಸುವ ಪ್ರಶ್ನೆಗಳು ಈ ಕೆಳಕಂಡಂತೆಃ

ಪ್ರಶ್ನೆ-1 ಃ ಫಿರ್ಯಾದುದಾರರು ಆರೋಪಿಯ ವಿರುದ್ಧ **ಭಾ. ದಂ. ಸಂ. ಕಲಂ 406, 409, 420 ಹಾಗೂ 465** ಆರೋಪಗಳಿಗೆ ದೋಷಾರೋಪಣಾ ರಚಿಸಲು ಸಾಕಷ್ಟು ಸಾಕ್ಷಾಧಾರಗಳು ಇರುತ್ತವೆಂದು ತೋರ್ಪಡಿಸಿರುತ್ತಾರೆಯೇ ?

ಪ್ರಶ್ನೆ-2 ಃ ಯಾವ ಆದೇಶ ?

**6.** ಮೇಲ್ಕಂಡ ಪ್ರಶ್ನೆಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ

ಪ್ರಶ್ನೆಃ 1 ಃ **ನಕಾರಾತ್ಮಕವಾಗಿ**

ಪ್ರಶ್ನೆಃ 2 ಃ ಅಂತಿಮ ಆದೇಶದಂತೆ.

**ಃ ಕಾರಣಗಳು ಃ**

**7.** ಫಿರ್ಯಾದುದಾರರು ತಮ್ಮ ಪ್ರಮಾಣಪೂರ್ವಕ ಹೇಳಿಕೆ ಮತ್ತು ಸಾಕ್ಷ್ಯದಲ್ಲಿ ದೂರಿನಲ್ಲಿರುವ ಅಂಶಗಳನ್ನು ಪುನರ್ ಪ್ರತಿಪಾದಿಸಿರುತ್ತಾರೆ. ದೂರುದಾರರ ದೂರು ಮತ್ತು ಅವರ ಸಾಕ್ಷ್ಯವನ್ನು ಪರಿಗಣಿಸಿದಾಗ ಆರೋಪಿಯು ದೂರುದಾರರಿಗೆ ಸೇರಿದ ಸಂಸ್ಥೆಯಲ್ಲಿ ಏರಿಯಾ ಮ್ಯಾನೇಜರ್ ಆಗಿ ಮತ್ತು ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ, ಈ ಅಂಶವನ್ನು ನಿಪಿ-1 ರಿಂದ 6 ರ ದಾಖಲಾತಿಗಳು ದೃಢೀಕರಿಸುತ್ತದೆ. ಆರೋಪಿಯು ಉತ್ತರಪ್ರದೇಶದ ಮೊರದಾಬಾದ್‌ನ ಮಿಂಟ್ ಪ್ರಾಜೆಕ್ಟ್ ನಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾಗ ಸಂಸ್ಥೆಯ ಹಣವನ್ನು ದಾಖಲಾತಿಗಳನ್ನು ಸೃಷ್ಟಿಸಿ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂಬುದು ದೂರುದಾರರ ಆಪಾದನೆಯಾಗಿರುತ್ತದೆ. ದೂರುದಾರರು ಈ ಪ್ರಕರಣದಲ್ಲಿ ಪ್ರಾಸಾ-1

ಎಂದು ವಿಚಾರಣೆಗೆ ಒಳಪಟ್ಟಿರುತ್ತಾರೆ, ಅವರ ಸಾಕ್ಷ್ಯಕ್ಕೆ ಸಹಾಯವಾಗಿ ಪ್ರಾಸಾ-2 ರವರನ್ನು ವಿಚಾರಣೆ ಮಾಡಿರುತ್ತಾರೆ. ದೂರುದಾರರು ದೂರು ಮತ್ತು ಅವರ ಪರ ನೀಡಿರುವ ಸಾಕ್ಷ್ಯವನ್ನು ಪರಿಶೀಲಿಸಿದಾಗ ಆರೋಪಿಯ ವಿರುದ್ಧ ಮೇಲ್ನೋಟಕ್ಕೆ ಕಾಣುವಂತೆ ಈ ಪ್ರಕರಣ ಇರುವುದು ಕಂಡು ಬರುತ್ತದೆ. ಈ ಪ್ರಕರಣದಲ್ಲಿ ಗುರತಿಸಿರುವ ನಿಪಿ-8 ರಿಂದ 42 ರವರೆಗಿನ ದಾಖಲಾತಿಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ ಆರೋಪಿಯ ವಿರುದ್ದ ದಸ್ತಾವೇಜು ಸಾಕ್ಷ್ಯ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆರೋಪಿಯು ಚೆಕ್ ಗಳನ್ನು ದುರುಪಯೋಗ ಮಾಡಿಕೊಂಡಿರುವುದು ಮತ್ತು ಆರೋಪಿ ಮತ್ತು ಆತನ ಪತ್ನಿಯ ಬ್ಯಾಂಕ್ ಖಾತೆಗೆ ಹಣ ಜಮಾ ಆಗಿರುವ ಬಗ್ಗೆ ದಾಖಲಾತಿಗಳಲ್ಲಿ ಉಲ್ಲೇಖ ಇದ್ದು ಈ ಅಂಶವೂ ಆರೋಪಿಯ ವಿರುದ್ಧ ಪ್ರಕರಣ ಇರುವುದಾಗಿ ತೋರ್ಪಡಿಸುತ್ತದೆ. ಈ ಹಂತದಲ್ಲಿ ಪ್ರತಿಯೊಂದು ದಾಖಲಾತಿಯ ಬಗ್ಗೆ ಸಮಗ್ರವಾಗಿ ಚರ್ಚಿಸುವುದು ಅನಗತ್ಯವಾಗಿರುತ್ತದೆ, ಪ್ರಾಸಾ-1 ಮತ್ತು 2 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿದ್ದರೂ ಸಹ ಆರೋಪಿಯ ವಿರುದ್ದ ಈ ಹಂತದಲ್ಲಿ ಪ್ರಕರಣವನ್ನು ವಜಾಗೊಳಿಸಲು ಅಗತ್ಯವಾದ ಸಾಕ್ಷ್ಯ ಕಂಡು ಬರುತ್ತಿರುವುದಿಲ್ಲ. ಆದ್ದರಿಂದ ಈ ಪ್ರಕರಣವೂ ವಿಚಾರಣೆ ನಡೆಸಲು ಯೋಗ್ಯವಾದ ಪ್ರಕರಣವಾಗಿರುತ್ತದೆ.

Akin to this it is impeccable to rely the dictum of **Honb'le Apex Court titled "Kanti Badra Shah Vs. State of West Bengal" cited as "AIR 2000 SC 522"** wherein it is held that if the trial Court decides to frame a charge there is no legal requirement that he should pass an order specifying the reasons as to why it opts to do so. Framing of charge itself is prima-facie order that the trial Judge has formed the opinion, upon considering the police report and other documents and after hearing both sides, that there is ground for presuming that the accused have committed the offence

concerned. It is further held that if there is no legal requirement that the trial court should write an order showing the reasons for framing a charge, there is no need to further burden the already burdened trial courts with such extra work. The time has reached to adopt all possible measures to expedite the Court procedures and to chalk out measures to avert all roadblocks causing avoidable delays.

**8.** In another dictum of the **Hon'ble Supreme court titled State of Orissa V/s. Deberndra Nath Pandhi cited in 2005 SCC [Crl] page 415** - held that at the stage of framing of the charges the court cannot look into the say of the accused persons.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಮೇಲ್ಕಂಡ ತೀರ್ಪುಗಳಲ್ಲಿ ಸ್ಪಷ್ಟಪಡಿಸಸಿರುವುದು ಏನೆಂದರೆ ವಿಚಾರಣಾ ನ್ಯಾಯಾಲಯ ದೋಷಾರೋಪಣೆ ರಚಿಸುವ ಪೂರ್ವದಲ್ಲಿ ದೋಷಾರೋಪಣೆ ರಚಿಸಲು ಕಾರಣಗಳನ್ನು ನೀಡಿ ವಿವರವಾದ ಆದೇಶವನ್ನು ಮಾಡುವ ಅಗತ್ಯ ಇರುವುದಿಲ್ಲ, ಮುಂದುವರೆದು ಅಭಿಯೋಜನೆಯ ಅಂಶಗಳನ್ನು ಸೂಕ್ಷ್ಮವಾಗಿ ಮತ್ತು ಸವಿವರವಾಗಿ ಪರಾಮರ್ಶಿಸುವ ಅಗತ್ಯವಿರುವುದಿಲ್ಲ, ಅದೇ ರೀತಿ ವಿಚಾರಣೆ ನಡೆದಲ್ಲಿ ಆರೋಪಿಗೆ ಶಿಕ್ಷೆಯಾಗುತ್ತದೆ ಎಂದು ಖಚಿತ ಸಾಕ್ಷ್ಯಾಧಾರ ಇರುವುದಾಗಿ ಅಭಿಪ್ರಾಯ ವ್ಯಕ್ತಪಡಿಸುವ ಅಗತ್ಯವಿರುವುದಿಲ್ಲ. ಮುಂದುವರೆದು, ದೋಷಾರೋಪಣೆ ರಚಿಸಲು ಅಗತ್ಯವಾದ ಮೇಲ್ನೋಟಕ್ಕೆ ಕಾಣುವಂತಹ ಪ್ರಕರಣ ಕಂಡು ಬಂದಲ್ಲಿ ಸಾಕಾಗುತ್ತದೆ, ಗಂಭೀರವಾಗಿ ಪ್ರಕರಣವನ್ನು ಪರಾಮರ್ಶಿಸುವ ಅಗತ್ಯ ಇರುವುದಿಲ್ಲ. ಈ ಎಲ್ಲಾ ಮೇಲ್ಕಂಡ ತತ್ವಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುತ್ತದೆ, ಈ ಪ್ರಕರಣದಲ್ಲಿ ಆರೋಪಿ ಪರ ವಕೀಲರು ಸದರಿ ಆರೋಪಿ ಯಾವುದೇ ಅಪರಾಧಿಕ ಕೃತ್ಯ ಮಾಡಿರುವುದಿಲ್ಲವೆಂದು ಮೌಖಿಕವಾಗಿ ಪ್ರತಿಪಾದಿಸುವುದನ್ನು ಪರಿಗಣಿಸಿ, ಸದರಿ

ಆರೋಪಿಯನ್ನು ಪ್ರಕರಣದಿಂದ ವಿಮೋಚನೆ ಗೊಳಿಸಲು ಸಾಧ್ಯವಿರುವುದಿಲ್ಲ, ಮುಂದುವರೆದು, ಆರೋಪಿಗೆ ವಿರುದ್ಧವಾಗಿ ಮೇಲ್ನೋಟಕ್ಕೆ ಕಾಣುವಂತೆ ಸಾಕಷ್ಟು ದಸ್ತಾವೇಜು ಸಾಕ್ಷ್ಯ ಈ ಪ್ರಕರಣದಲ್ಲಿ ಕಂಡು ಬರುತ್ತದೆ. ದೂರುದಾರರು ಸಂಶಯಕ್ಕೆ ಅಸ್ಪದವಿಲ್ಲದಂತೆ ಈ ಹಂತದಲ್ಲಿ ಆರೋಪಿಯ ವಿರುದ್ಧ ಪ್ರಕರಣವನ್ನು ಸಾಭೀತುಪಡಿಸುವ ಅಗತ್ಯವಿರುವುದಿಲ್ಲ, ಮೇಲ್ನೋಟಕ್ಕೆ ಕಾಣುವಂತೆ ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಲು ಅಗತ್ಯ ಸಾಕ್ಷ್ಯ ಇರುತ್ತದೆ ಎಂದು ತೋರ್ಪಡಿಸಿದ್ದಲ್ಲಿ ಸಾಕಾಗುತ್ತದೆ, ದೂರುದಾರರು ಈ ಹಂತದಲ್ಲಿ ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಲು ಅಗತ್ಯ ಸಾಕ್ಷ್ಯ ಇರುತ್ತದೆ ಎಂದು ಮೇಲ್ನೋಟಕ್ಕೆ ತೋರ್ಪಡಿಸಿರುತ್ತಾರೆ, ಆದ್ದರಿಂದ ಆರೋಪಿಯನ್ನು ಈ ಹಂತದಲ್ಲಿ ಪ್ರಕರಣದಿಂದ ವಿಮೋಚನೆಗೊಳಿಸಲು ಯಾವುದೇ ಆಧಾರವಿರುವುದಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಕ್ಕೆ ಬಂದಿರುತ್ತದೆ. ಅದರಂತೆ ಪ್ರಶ್ನೆ.1 ನ್ನು **ನಕರಾತ್ಮಕವಾಗಿ** ಉತ್ತರಿಸುತ್ತೇನೆ.

**9.** **ಪ್ರಶ್ನೆ-2ಃ** ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರಿಸಿರುವಂತೆ ಅಂತಿಮ ಆದೇಶ ಕೆಳಕಂಡಂತಿರುತ್ತದೆ.

**ಃ ಆದೇಶ ಃ**

**ದಂ. ಪ್ರ. ಸಂ. ಕಲಂ 245 ರ ಅನ್ವಯ ಆರೋಪಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿದೆ.**

**ಪ್ರಕರಣವನ್ನು ದೋಷಾರೋಪಣೆ ರಚಿಸಲು ದಿನಾಂಕ 22.05.2025 ಕ್ಕೆ ಮುಂದೂಡಲಾಗಿದೆ.**

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನವನ್ನು ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ ಮಾಡಿ ನಂತರ ಇಂದು 20**ನೇ ಮಾರ್ಚ್** - 2025 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ಕೇಶವಮೂರ್ತಿ .ಬಿ.)**
IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.

## :: ಅನುಬಂಧ ::

**ಫಿರ್ಯಾದುದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:**

| | | |
|---|---|---|
| ಪ್ರಾಸಾ-1 | - | ಶ್ರೀ ಸಿ.ಎಂ.ಎನ್. ಶಾಸ್ತ್ರೀ |
| ಪ್ರಾಸಾ-2 | - | ಶ್ರೀ ನಿಹಾಲ್ ಸಿಂಗ್ |

**ಫಿರ್ಯಾದುದಾರರ ಪರವಾಗಿ ಗುರುತಿಸಲಾದ ದಾಖಲೆಗಳು:**

| | | |
|---|---|---|
| ನಿ.ಪಿ.1 | - | Authorization Letter of Company |
| ನಿ.ಪಿ.2 | - | Copy of Appointment Letter |
| ನಿ.ಪಿ.3 | - | Promotion Letter |
| ನಿ.ಪಿ.4 | - | Letter of promoted as Marketing Manager |
| ನಿ.ಪಿ.5 | - | Letter of designated as Manager - Projects |
| ನಿ.ಪಿ.6 | - | Letter of in charge of input division |
| ನಿ.ಪಿ.7 | - | Mint project report |
| ನಿ.ಪಿ.8 | - | Another Mint project report |
| ನಿ.ಪಿ.9 | - | Accounts Extract |
| ನಿ.ಪಿ.10-12 | - | Cash Advance Vouchers |
| ನಿ.ಪಿ.13 | - | Program Chart |
| ನಿ.ಪಿ.14-21 | - | Eight Air ticket Correspondences |
| ನಿ.ಪಿ.22 | - | Journal Voucher |
| ನಿ.ಪಿ.23 | - | Cash Payment Voucher |
| ನಿ.ಪಿ.24 | - | Out Station Visit Dt.01.06.2007 |
| ನಿ.ಪಿ.25 | - | Bills and Cash Payment Vouchers |
| ನಿ.ಪಿ.26 | - | E-mail copy |
| ನಿ.ಪಿ.27 | - | Journal Voucher |
| ನಿ.ಪಿ.28 | - | Cash payment Voucher |
| ನಿ.ಪಿ.29 | - | Expenses List |
| ನಿ.ಪಿ.30 | - | Journal Voucher |

| | | |
|---|---|---|
| ನಿ.ಪಿ.31 | - | Cash Payment voucher |
| ನಿ.ಪಿ.32 | - | Journal Voucher |
| ನಿ.ಪಿ.33 | - | Cash Payment Voucher |
| ನಿ.ಪಿ.34 | - | List of Expenses |
| ನಿ.ಪಿ.35 | - | Journal Voucher |
| ನಿ.ಪಿ.36 | - | Cash Payment voucher |
| ನಿ.ಪಿ.37 | - | List of Expenses |
| ನಿ.ಪಿ.38 | - | Journal Voucher |
| ನಿ.ಪಿ.39 | - | Cash Payment voucher |
| ನಿ.ಪಿ.40 | - | List of Expenses |
| ನಿ.ಪಿ.41 | - | Appointment Letter of Mr.Patak |
| ನಿ.ಪಿ.42 | - | Appointment Letter of Mr.Nehal Singh |
| ನಿ.ಪಿ.43 | - | SB Account of Passbook |
| ನಿ.ಪಿ.44 | - | Bank Statement of Account |
| ನಿ.ಪಿ.45-46 | - | Ledger Account Extracts |
| ನಿ.ಪಿ.47 | - | Mint purchase details |
| ನಿ.ಪಿ.48 | - | Purchase and Expenses details |
| ನಿ.ಪಿ.49 | - | Affidavit of D.N.Patak |
| ನಿ.ಪಿ.50 | - | Affidavit of Nihal Singh |
| ನಿ.ಪಿ.51-56 | - | Brouchers and Literature of the company |
| ನಿ.ಪಿ.57 | - | Copy of Bill |
| ನಿ.ಪಿ.58 | - | Diary |
| ನಿ.ಪಿ.59 | - | Reply Letter |

IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.

**(ಆದೇಶವನ್ನು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

**:ಆದೇಶ :**

**ದಂ. ಪ್ರ. ಸಂ. ಕಲಂ 245 ರ ಅನ್ವಯ ಆರೋಪಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿದೆ.**

**ಪ್ರಕರಣವನ್ನು ದೋಷಾರೋಪಣೆ ರಚಿಸಲು ದಿನಾಂಕ 22.05.2025 ಕ್ಕೆ ಮುಂದೂಡಲಾಗಿದೆ.**

**(ಪ್ರತ್ಯೇಕವಾಗಿ ಆದೇಶ ಮಾಡಲಾಗಿದೆ)**

IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.